‘ಹೌದಲ್ವಾ… ಅಜ್ಜಿ ಮೊದಲೇ ಒಪ್ಪಿಗೆ ಕೊಟ್ಟ ಮೇಲೆ ಇದು ಒಂದು ರೀತಿಯಲ್ಲಿ ತಪ್ಪಾಲ್ವ?’ ಅಮ್ಮನಲ್ಲಿ ಕೇಳಿದೆ. ನನಗೂ ಈ ವಿಚಾರದಲ್ಲಿ ಕುತೂಹಲವಿತ್ತು. ಇವತ್ತು ಅಮ್ಮ ಮೂಡಿನಲ್ಲಿ ಇದ್ದಾಳೆ. ಇವತ್ತು ಎಲ್ಲ ಕೇಳಿಕೊಳ್ಳದಿದ್ದರೆ ಮತ್ತೊಮ್ಮೆ ಅಮ್ಮ ಹೇಳಿಯಾಳು ಅನ್ನುವ ಖಾತ್ರಿ ಇಲ್ಲ ನಂಗೆ.

‘ನಂಗೂ ಹಾಗೆ ಅನ್ನಿಸಿತ್ತು ಮಗಳೇ… ಆದರೆ ಅವರು ಅಜ್ಜಿಯಲ್ಲಿ ಇಂತವಳೆ ಬೇಕೂ ಅಂತ ಕೇಳಿರಲಿಲ್ಲವಂತೆ. ಅವರ ಮಾತಿಗೆ ಮರ್ಯಾದೆ ಕೊಟ್ಟು ಮೊದಲ ಮದುವೆಗೆ ಸಂಬಂಧ ಬಂದಾಗ ಕೇಳಿ ಆಗಿದೆ. ಅವರು ಬಾಯಿ ಬಿಟ್ಟು ಇಂತದೇ ಹುಡುಗಿ ಅಂತ ಹೇಳಿದ್ರೆ ಏನಾದರೂ ವ್ಯವಸ್ಥೆ ಮಾಡಬಹುದಿತ್ತು. ಅದಕ್ಕಾಗಿಯೇ ಅಜ್ಜಿ ನಂತರ ಕೇಳಿ ಮುಖಭಂಗ ಆಗಬಾರದು, ಯಾವುದೋ ಕ್ಷಣದಲ್ಲಿ ಕೇಳಿದ್ದು ಈಗ ಅವರಿಗೆ ಬೇಡ ಅನ್ನಿಸಿರಲೂಬಹುದು ಅಂತ ಮತ್ತೊಮ್ಮೆ ಕೇಳುವ ಉಸಾಬರಿಗೆ ಹೋಗಲಿಲ್ಲವಂತೆ.’

‘ಹಮ್…, ಅದು ಸರಿಯೇ. ಹೇಳು ಮತ್ತೇನಾಯ್ತು?’

‘ಹುಡುಗಿಯ ಒಪ್ಪಿಗೆಯಿಲ್ಲ ಮತ್ತು ಇದು ಏಕಮುಖ ಪ್ರೀತಿ ಅಂತ ಗೊತ್ತಾಗಿ ಆ ದೂರು ಸಿಂಧು ಆಗಲಿಲ್ಲ. ಆದರೆ ಊರಿನಲ್ಲಿ ಮಾತ್ರ ಸುದ್ದಿ ಮಾಡಿತು. ಬೋಜಪ್ಪನಿಗೆ ಹಾಲು ಕುಡಿದಷ್ಟು ಸಂತೋಷವಾಗಿತ್ತು. ವರನ ಮನೆ ಎಲ್ಲಿ ಏನೂ ಅಂತ ಗೊತ್ತಿಲ್ಲದ ಕಾರಣ ಅಲ್ಲಿತನಕ ಸುದ್ದಿ ಹೋಗಿ ಮುಟ್ಟುವಷ್ಟು ಸಮಯಾವಕಾಶವಿರಲಿಲ್ಲ. ಆದರೆ ಮಣಿ ಚಿಕ್ಕಿಯ ಗಂಡ ಸದಾ ಭಾವ ತುಂಬಾ ಒಳ್ಳೆಯವರೇ. ಇದೆಲ್ಲ ಗೊತ್ತಾಗಿದ್ದರೂ ಅದಕ್ಕೆಲ್ಲ ಸೊಪ್ಪು ಹಾಕುತ್ತಿರಲಿಲ್ಲವೆಂದು ತೋರುತ್ತದೆ. ಅಂತೂ ಇಂತೂ ಮಣಿ ಚಿಕ್ಕಿಗೇ ಮದುವೆ ಆಯ್ತು. ಅದೆಷ್ಟು ದೂರ ಮದುವೆ ಮಾಡಿಕೊಟ್ಟರೆಂದರೆ ಅವಳು ಮತ್ತೆ ಬಂದದ್ದು ಹರಿಣಿಯ ಗರ್ಭಿಣಿಯಾಗಿ ಹೆರಿಗೆ ಆಗಲು. ಬರುವಾಗ ಅದೆಷ್ಟು ಬದಲಾಗಿದ್ದಳೆಂದರೆ ಎರಡು ಸುತ್ತ ದಪ್ಪ ಹೆಚ್ಚು ಆಗಿ ಮುಖ ಕಣ್ಣು ಕುಕ್ಕುವಷ್ಟು ಪ್ರಕಾಶಮಾನವಾಗಿತ್ತೆಂದರೆ, ಆಚೆ ಮನೆ ಬೋಜಪ್ಪನಿಗೂ ಅವಳ ಗುರುತು ಸಿಕ್ಕಲಿಲ್ಲ. ನಂತರ ನಂತರ ನಾಕು ವರ್ಷ ಕಳೆದ ಮೇಲೆ ಅವಳ ತಂಗಿ ರಾಗಿಣಿ ಹುಟ್ಟಿದ್ದು. ಅಲ್ಲಿ ಶಾಲೆಗೆ ತುಂಬಾ ದೂರ ಅನ್ನುವ ಕಾರಣಕ್ಕೆ ಸದಾ ಭಾವನೇ ಹರಿಣಿಯನ್ನ ಇಲ್ಲಿ ಬಿಟ್ಟು ಹೋದದ್ದು.’

‘ಹರಿಣಿ ಹುಟ್ಟಿದ ಮೇಲೂ ಸಾಬು ಭಾವನ ಮನೆಯವರು ನೋಡಲು ಬರಲಿಲ್ಲ. ಶಾಂತಿ ಅತ್ತೆಗೆ ಬರಲು ಮನಸು ಇದ್ದಿರಬಹುದು. ಆದರೆ ಸಾಬು ಭಾವನ ಹೆದರಿಕೆಯಿಂದ ಬರದೇ ಇದ್ದಿರಲೂಬಹುದು.

ಈಗಂತೂ ಅವರಿಗೆ ವಯಸ್ಸಾಗಿದೆ. ಅವರ ಕಾರುಬಾರು ಏನೂ ನಡೆಯುವುದಿಲ್ಲ ಅಲ್ಲಿ. ಹಾಗಾಗಿ ಇರುವ ಒಬ್ಬ ಮಗನನ್ನು ಎದುರು ಹಾಕಿಕೊಂಡು ಮನಸು ಯಾಕೆ ಹಾಳು ಮಾಡಿಕೊಳ್ಳುವುದು ಅಂತ ತೆಪ್ಪಗೆ ಇದ್ದಿರಬೇಕು. ಎಷ್ಟು ಒತ್ತಾಯ ಮಾಡಿದರೂ ಒಂದೆರಡು ವರ್ಷ



ಅವ ಮದುವೆಯೇ ಆಗಲಿಲ್ಲ. ತದನಂತರ ಅವನ ಅಕ್ಕಂದಿರು ಬಂದು ಕೂರಿಸಿ ಅವನಿಗೆ ಬುದ್ದಿ ಹೇಳಿದ ನಂತರ ದೂರದ ನೆಂಟಸ್ಥಿಕೆಯಿಂದ ಏಳನೇ ತರಗತಿ ಓದಿದ ಶ್ಯಾಮಲನನ್ನು ಮದುವೆಯಾದ ಮೇಲೆ ಆರ್ಮಿ ಬಿಟ್ಟು ತೋಟ ತುಡುಗೆ ಅಂತ ಊರಲ್ಲೇ ತೊಡಗಿಕೊಂಡಿದ್ದರೂ ನಮ್ಮಲ್ಲಿಗೆ ಹೋಗುವುದು ಬರುವುದೂ ನಿಂತೇಹೋಗಿತ್ತು. ಒಮ್ಮೆ ಸಂಬಂಧ ಮುರಿದರೆ ಮೊದಲಿನಂತಾಗುವುದು ಕಷ್ಟ. ಸಾಬು ಭಾವನಿಗೆ ಅಷ್ಟೊಂದು ಪ್ರೀತಿಯಿತ್ತ? ಅಥವಾ ಹುಡುಗಿ ಒಪ್ಪಿಗೆ ಸೂಚಿಸಲಿಲ್ಲ ಅಂತ ಅವನ ಅಹಂಗೆ ಪೆಟ್ಟು ಬಿತ್ತಾ? ಆದರೆ ಮೊದಲೇ ಒಂದು ನಮೂನೆ ಸೀರಿಯಸ್ ಆಗಿರುವ ಸಾಬು ಭಾವ ಮತ್ತಷ್ಟು ಮೂಡಿ ಆದದ್ದಂತೂ ಸತ್ಯ. ಯಾರ ಜೊತೆಗೂ ಹೆಚ್ಚು ಮಾತಿಲ್ಲ ಕತೆಯಿಲ್ಲ. ಎಲ್ಲೂ ಅವನನ್ನು ಕಾಣಲಿಕ್ಕೆ ಸಿಕ್ಕುವುದಿಲ್ಲ. ಶುಕ್ರವಾರದ ಸಂತೆ ಮುಗಿಸಿ ಗದ್ದೆ ದಾಟಿ ಹೋಗುವಾಗಲಷ್ಟೇ ಕಣ್ಣಿಗೆ ಬೀಳುವುದು.

ಆ ದಿನ ನಡುರಾತ್ರಿ. ವಿಪರೀತ ಚಳಿ ಇತ್ತು. ಕಾರಿನಿಂದ ರುಕ್ಕು ಅತ್ತಿಗೆ ಬಂದಿಳಿದವರೇ, ಹರಿಣಿಯನ್ನು ತಬ್ಬಿಕೊಂಡು ಗೋಳೋ ಅಳುತ್ತಿದ್ದಾರೆ. ನನಗೆ ಪಕ್ಕನೆ ಮಣಿ ಚಿಕ್ಕಿಗೆ ಏನೋ ಆಗಿದೆ ಅಂತ ಕೈ ಕಾಲು ನಡುಗಲು ಶುರುವಾಗಿತ್ತು ನೋಡು. ಹರಿಣಿಯ ಅಪ್ಪ, ಸದಾ ಭಾವ ವೈದ್ಯರ ಅಚಾತುರ್ಯದಿಂದ ತೀರಿಹೋದರೆಂದು ನಿಧಾನಕ್ಕೆ ಹೇಳುವಾಗ ಕಲ್ಲಾಗಿದ್ದೆ. ಏನೂ ಗೊತ್ತಿಲ್ಲದ ಹರಿಣಿ ಕಾರು ಹತ್ತಿ ಹೋಗಿದ್ದಳು. ಸಾಬುವಿನದೇ ಶಾಪ ತಟ್ಟಿರಬಹುದು ಅಂತ ಜನ ಮಾತಾಡಿಕೊಂಡರು. ನನಗೂ ಬೇಡವೆಂದರೂ ಹಾಗೇ ಅನ್ನಿಸುತ್ತಿತ್ತು. ಇದೆಲ್ಲ ಕೇಳಿ ಒಂದು ರೀತಿಯಲ್ಲಿ ಎದೆ ಭಾರ ಆಗಿಹೋಯಿತು. ಬಹುಶಃ ಸಾಬು ಭಾವನನ್ನು ಮದುವೆ ಆಗಿದ್ದರೆ, ಮಣಿ ಚಿಕ್ಕಿ ಹಣೆಯಲ್ಲಿ ಇನ್ನೂ ಕುಂಕುಮ ಇರುತ್ತಿತ್ತು. ಇನ್ನು ಆ ಎರಡು ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಆ ಹೆಣ್ಣುಜೀವ ಆ ಕಾಡಿನ ಒಳಗೆ ಹೇಗೆ ಜೀವನ ಸಾಗಿಸುವುದು? ಒಬ್ಬೊಬ್ಬರ ಬದುಕು ಹೇಗೆ ಒಂದೊಂದು ಘಟ್ಟದಲ್ಲಿ ಆಕಸ್ಮಿಕ ತಿರುವುಗಳನ್ನು ಪಡೆದುಕೊಳ್ಳುತ್ತಲೇ ಇರುತ್ತದೆ? ಇದಕ್ಕೆಲ್ಲ ಯಾರನ್ನ ಹೊಣೆಯಾಗಿಸುವುದು? ಈ ನಡುವೆ ಸಾಬು ಭಾವನ ಹೆಂಡತಿ ಒಂದು ನಡುಹಗಲು ಎದೆನೋವು ಬಂದು ಹಾಗೆ ಟಪ್ಪಂತ ಬದುಕಿನ ವ್ಯಾಪಾರ ಮುಗಿಸಿಬಿಟ್ಟಿದ್ದಳು. ಇದೇನಿದು ವಿಚಿತ್ರ?

ಮಣಿ ಚಿಕ್ಕಿ ನಂತರ ಹೆಚ್ಚು ಕಡಿಮೆ ಮೂಕಿಯಾಗಿಬಿಟ್ಟಳು. ಮದುವೆ, ಜಂಬರ ಅಂತ ಈಚೆ ಬರುವುದೇ ನಿಲ್ಲಿಸಿಬಿಟ್ಟಳು. ಮಕ್ಕಳ ಕಡೆ ಹೆಚ್ಚು ನಿಗಾ ಕೊಟ್ಟು ಬೆಳೆಸತೊಡಗಿದಳು.

ಇತ್ತೀಚೆಗೆ ಹರಿಣಿ ಅಂಚೆ ಇಲಾಖೆಯಲ್ಲಿ ಉದ್ಯೋಗ ಗಿಟ್ಟಿಸಿಕೊಂಡು ಕತೆ ಕವನ ಅಂತ ಅದರ ಗುಂಗಿಗೆ ಬಿದ್ದು ಒಂದಷ್ಟು ಹೆಸರು ಮಾಡಿದ್ದಳು. ತಂಗಿ ರಾಗಿಣಿಯೂ ಪಿಯುಸಿ ಮುಗಿಸಿ ಡಿ.ಎಡ್. ಮಾಡಿ ಕೊಡಗಿನ ಶಾಲೆಯೊಂದರಲ್ಲಿ ಇತ್ತೀಚೆಗಷ್ಟೇ ಟೀಚರ್ ಆಗಿ ನೇಮಕಗೊಂಡಿದ್ದಾಳೆ. ಮೊನ್ನೆ ಸಾಬು ಭಾವ ಸಿಕ್ಕವರು ಮಂಗಳದಲ್ಲಿ ಹರಿಣಿ ಬರೆದ ಕತೆ ಓದಿದೆ, ಖುಷಿ ಆಯಿತು. ಅವಳಿಗೆ ನನ್ನ ಅಭಿನಂದನೆ ತಿಳಿಸಿ ಬಿಡು ಹೇಳಿದ್ದು ನಿಜಕ್ಕೂ ಅಚ್ಚರಿಯಾಯಿತು. ವಯಸ್ಸು ಎಲ್ಲವನ್ನೂ ಮಾಗಿಸುತ್ತಾ? ಯೋಚಿಸುತ್ತಾ ಹರಿಣಿಗೆ ಮೆಸೇಜು ಟೈಪಿಸಿದೆ. ಆಚೆಯಿಂದ ನಗುವಿನ ಇಮೋಜಿ ಬಂದು ಕೂತಿತು. ಸಾಬು ಭಾವನ ಮಗನೂ ರಾಗಿಣಿಯು ಒಂದೇ ಶಾಲೆಯಲ್ಲಿ ಕೆಲಸ ಮಾಡುವವರು. ಈ ಹಳೇಕತೆಗಳು ಅವರಿಗಿಬ್ಬರಿಗೂ ಗೊತ್ತಿಲ್ಲ. ಅವರಿಬ್ಬರೂ ಒಬ್ಬರನ್ನೊಬ್ಬರು ಇಷ್ಟಪಟ್ಟು ಈಗ ಮದುವೆಯಾಗಲು ತೀರ್ಮಾನ ಮಾಡಿರುವ ಸುದ್ದಿ ಅವಳೇ ಹೇಳಿದಳು. ಎಲ್ಲ ಅಯೋಮಯದಂತೆ ತೋರಿತು. ಮಣಿ ಚಿಕ್ಕಿಯೂ ಒಪ್ಪಿರುವುದಾಗಿ ಹೇಳಿದಳು. ಹೋಗುವುದು ಬರುವುದು ಒಂದೂ ಆಗಿಲ್ಲ, ಅದಕ್ಕೆ ಇನ್ನೂ ಯಾರಲ್ಲೂ ಹೇಳಿಲ್ಲ ಎಂದಳು. ‘ಸಾಬು ಭಾವ ಒಪ್ಪಿದ್ದಾರ?’ ಕೇಳಿದೆ.

‘ಯಾವುದೇ ತಕರಾರು ಇಲ್ಲದೆ ಒಪ್ಪಿಕೊಂಡಿದ್ದಾರೆ ಅಂತೆ. ಅವರೇ ಅಮ್ಮನಿಗೆ ಫೋನಾಯಿಸಿ ಸಣ್ಣದೊಂದು ನಡುವಿನ ಮೌನದಿಂದ ಇಷ್ಟೆಲ್ಲ ಆಗಿಹೋಯಿತು. ಯಾವುದನ್ನೂ ಮನಸಿನಲ್ಲಿ ಇಟ್ಟುಕೊಳ್ಳಬೇಡ. ಹರಿಣಿಗೆ ನಾನೇ ಒಳ್ಳೆಯ ಸಂಬಂಧ ಹುಡುಕಿ ಮದುವೆ ಮಾಡುವೆ. ನಾವು ಹೇಗೂ ಈ ಜನ್ಮದಲ್ಲಿ ಒಂದಾಗಲಿಲ್ಲ. ಇದು ನಮ್ಮ ಮಕ್ಕಳ ಮೂಲಕ ಆಗುತ್ತಿದೆ ಅನ್ನುವುದು ನನಗೆ ನೆಮ್ಮದಿ’ ಅಂದರಂತೆ. ಇದನ್ನೆಲ್ಲ ಅಮ್ಮ, ಮೀರಾ ದೊಡ್ಡಮ್ಮನೊಂದಿಗೆ ಹೇಳುವುದನ್ನು ನಾನು ಕೇಳಿಸಿಕೊಂಡೆ. ಆದರಿಂದ ನಿನಗೆ ವಿಷಯ ಗೊತ್ತಿರಬಹುದು ಅಂದುಕೊಂಡು ನಾನು ತೆಪ್ಪಗಾದೆ. ನಾನು ಈ ಹಿಂದೆ ನೀನು ಹೇಳಿದ ವಿಷಯ ಯಾವುದೂ ಗೊತ್ತಿಲ್ಲದಂತೆ ಇರುವೆ. ಬಿಡು, ಆಗುವುದ್ದಕ್ಕೆಲ್ಲ ಒಳ್ಳೆಯದೇ. ಇನ್ನಾದರೂ ಸಾಬು ಭಾವ ನಿನ್ನ ನೋಡಿ ನಗುತ್ತಾರೆ ಏನೋ’ ಅಂದೆ. ಇಬ್ಬರೂ ನಕ್ಕೆವು.

ವಿಧಿ ಯಾವ ರೀತಿಯಲ್ಲಿ ಮುರಿದ ಸಂಬಂಧವನ್ನು ಒಂದುಗೂಡಿಸುತ್ತದೆ? ಆದರೂ ಇಷ್ಟೆಲ್ಲ ಗೊತ್ತಿದ್ದೂ ಅಮ್ಮ, ಮಣಿ ಚಿಕ್ಕಿಯ ವಿಷಯ ನನಗೆ ಹೇಳೆ ಇಲ್ವಲ್ಲಾ? ಎಲ್ಲರೂ ಗೌಪ್ಯ ಕಾಯುವವರೇ ಅನ್ನಿಸಿ ನಗು ಬಂದು ‘ನೋಡುವ, ಅಮ್ಮನ ಬಾಯಿಂದ ಏನಾದರೂ ಉದುರುತ್ತದಾ?’ ಅಂತ ಮಳ್ಳಿಯಂತೆ ಅಮ್ಮನಿಗೆ ಸುದ್ದಿ ತಿಳಿಸಲು ಫೋನು ಗುಂಡಿ ಒತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in